# ಹಿಂದಿಗೆ ಗ್ರೇಡ್ ಪದ್ಧತಿ ಬೇಡ: ಹೊರಟ್ಟಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ಅಂಕಗಳ ಬದಲಿಗೆ ಗ್ರೇಡಿಂಗ್ ನೀಡುವ ಸರ್ಕಾರದ ನಿರ್ಧಾರ ತಪ್ಪು. ಹಿಂದಿನ ವ್ಯವಸ್ಥೆಯನ್ನೇ ಮುಂದುವರಿಸಬೇಕು' ಎಂದು ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಇಲ್ಲಿ ಅಭಿಪ್ರಾಯಪಟ್ಟರು.

'ಶಿಕ್ಷಕ ಪ್ರತಿನಿಧಿಗಳ ಜೊತೆ ಚರ್ಚಿಸದೆ, 1961ರಿಂದ ಇರುವ ಅಂಕ ಪದ್ಧತಿ ಬದಲಿಸಲು ನಿರ್ಧರಿಸಿದ್ದು ಸರಿಯಲ್ಲ. ಮುಖ್ಯಮಂತ್ರಿ, ಶಿಕ್ಷಣ ಸಚಿವರ ಜೊತೆ ಇದರ ಬಗ್ಗೆ ಚರ್ಚಿಸುವೆ' ಎಂದು ಸೋಮವಾರ ಅವರು ಸುದ್ದಿಗಾರರಿಗೆ ತಿಳಿಸಿದರು.

'ದ್ವಿಭಾಷಾ ನೀತಿ ಆಡಳಿತದಲ್ಲಿ ಸರಿ. ಶಿಕ್ಷಣದಲ್ಲಿ ಸರಿಯಲ್ಲ. ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಹಿಂದಿ ಅಧ್ಯಯನ ವಿಭಾಗ ಇದೆ. ಅವುಗಳನ್ನೂ ಮುಚ್ಚುತ್ತೀರಾ' ಎಂದೂ ಪ್ರಶ್ನಿಸಿದರು.

'ಗ್ರೇಡಿಂಗ್ ನೀಡುವ ಕ್ರಮದಿಂದ ಹಿಂದಿ ಅಲ್ಲದೇ ತೃತೀಯ ಭಾಷೆಯಾಗಿ ಓದುವ ಕನ್ನಡ, ಉರ್ದು, ಉರ್ದು, ತಮಿಳು ಇನ್ನಿತರ ವಿಷಯಗಳಿಗೂ ಸಮಸ್ಯೆ ಆಗುತ್ತದೆ. ಹಿಂದಿ ಬಾರದಿದ್ದರೆ ಸಂಸದರಿಗೆ ಸಮಸ್ಯೆ ಆಗುತ್ತದೆ. ವಿವಿಧ ರಾಜ್ಯಗಳಿಗೆ ಹೋದಾಗ ಸಂವಹನಕ್ಕೆ ಹಿಂದಿ ಅವಶ್ಯ' ಎಂದರು.